


ಪ್ಲಾಸ್ಟಿಕ್ ಮಾಲಿನ್ಯದ ವಿರುದ್ಧ ಧ್ವನಿ ಎತ್ತಿರುವ ಹೆಗ್ಗಡಹಳ್ಳಿ ಶಾಲಾ ಮಕ್ಕಳು

ಎಳೆಯರ ಪ್ರಶ್ನೆಗಳಿಗೆ ಉತ್ತರಿಸಿದರು. ಅಂದಿನ ಶಿಕ್ಷಣ ಸಚಿವರಾಗಿದ್ದ ಸುರೇಶ್ ಕುಮಾರ್ ಅವರು ಪರೀಕ್ಷೆಗಳ ಕುರಿತು ಮಕ್ಕಳೊಡನೆ ವಿಡಿಯೊ ಸಂವಾದದಲ್ಲಿ ಪಾಲ್ಗೊಂಡು ಮಾತನಾಡಿದರು. ಕೊರೊನ ನಮ್ಮೀ ಸಂವಾದಕ್ಕೆ ತಾತ್ಕಾಲಿಕ ತಡೆ ಒಡ್ಡಿದೆ.

## ನಿಮ್ಮ ಕಸ ನಿಮಗೆ

ಪ್ಲಾಸ್ಟಿಕ್ ತ್ಯಾಜ್ಯದ ಸಮಸ್ಯೆ ಮತ್ತು ಜಾಗತಿಕ ತಾಪಮಾನದ ಏರಿಕೆ ನನ್ನನ್ನು ಸದಾ ಕಾಡುವ ಸಂಗತಿಗಳಲ್ಲೊಂದು. ಪ್ಲಾಸ್ಟಿಕ್ ನನಗೆ ಸಮಸ್ಯೆಯಾಗಿ ಕಂಡಿದ್ದು ನಾನು ವಿದ್ಯಾರ್ಥಿಯಾಗಿದ್ದಾಗ 1998ರಲ್ಲಿ. ಅಲ್ಲಿಂದ ಸದಾ ಅದರ ಬೆನ್ನತ್ತಿಕೊಂಡು, ಸಾಧ್ಯವಾದಷ್ಟು ಅದರ ಬಗ್ಗೆ ತಿಳಿ ಹೇಳುತ್ತಾ, ಕಡಿಮೆ ಬಳಸುತ್ತಾ ಬಂದವನು. ನಾಟಕದ ಮೇಷ್ಟ್ರಾದ ಮೇಲೆ ನಾಟಕಗಳ ಮೂಲಕ ಪ್ಲಾಸ್ಟಿಕ್ ದುಷ್ಪರಿಣಾಮಗಳನ್ನು ಮಕ್ಕಳಿಗೆ ತಿಳಿಸುತ್ತಾ ಬಂದವನು. 2018ರ ಆಗಸ್ಟ್‌ನಲ್ಲಿ ಗ್ರೇಟಾ ಥನ್‌ಬರ್ಗ್ ಎಂಬ ಸ್ವೀಡನ್ ದೇಶದ ಹೆಣ್ಣುಮಗಳು 'ಫ್ರೈಡೇಸ್ ಫಾರ್ ಫ್ಯೂಚರ್' ಎನ್ನುವ ಚಳವಳಿ (ಈ ಆಗಸ್ಟ್‌ಗೆ ಗ್ರೇಟಾಳ ಚಳವಳಿಗೆ ಮೂರು ವರ್ಷ ತುಂಬಿತು) ಹುಟ್ಟು ಹಾಕಿದಾಗ, ಅದರ ಸ್ಫೂರ್ತಿಯಿಂದ ನಾನು ಮಕ್ಕಳೊಡನೆ ಮಾತನಾಡಿ, 'ನಾಳೆಗಳು ನಮ್ಮದು' ಎನ್ನುವ ಧ್ಯೇಯವನ್ನಿಟ್ಟುಕೊಂಡು, 'ನಮ್ಮ ಶಾಲಾ ಮಟ್ಟದಲ್ಲಿ ಪ್ಲಾಸ್ಟಿಕ್ ಹಿಂದಿರುಗಿಸುವ ಚಳವಳಿ ಮಾಡೋಣ' ಎಂದೆ. ಇದಕ್ಕೆ ಮುಖ್ಯೋಪಾಧ್ಯಾಯರ ಒಪ್ಪಿಗೆಯೂ ದೊರೆಯಿತು.



2019ರ ಏಪ್ರಿಲ್ ತಿಂಗಳಿನಿಂದ ಕಂಪನಿಗಳಿಗೆ ಕಸಗಳನ್ನು ವಾಪಾಸು ಮಾಡುವುದಕ್ಕೆ ಆರಂಭಿಸಿದೆವು. ಪತ್ರ ಬರೆದೆವು. ಜಾಥಾ ಮಾಡಿದೆವು. ಮೊದಲ ಲಾಕ್‌ಡೌನ್ ಆಗುವವರೆಗೆ ಬಹುರಾಷ್ಟ್ರೀಯ ಕಂಪನಿಗಳಿಂದ ಹಿಡಿದು ಸ್ಥಳೀಯ ಕಂಪನಿಗಳಿಗೆ ಪ್ರತೀ ತಿಂಗಳೂ ಅವರ ಕಂಪನಿಯ ಕಸ ಕಳಿಸಿ, 'ಇದು ನಿಮ್ಮ ಕಸ, ನೀವೇ ಮರುಬಳಕೆ ಮಾಡಿ' ಎಂದು ಬರೆದು, ಶಾಲೆಯ ಮಕ್ಕಳೆಲ್ಲ ಸಹಿ ಮಾಡಿ ಒತ್ತಾಯಿಸಿದೆವು. ಕೋಲ್ಗೇಟ್, ನೆಸ್ಲೆ, ಯೂನಿಬಿಕ್ ಕಂಪನಿಯವರು ಮಕ್ಕಳಿಗೆ ಪತ್ರ ಬರೆದು, '2025ರ ಹೊತ್ತಿಗೆ ಪರಿಸರಕ್ಕೆ ಮಾರಕವಲ್ಲದ ಪ್ಯಾಕಿಂಗ್ ಸಾಮಗ್ರಿಗಳನ್ನು ಬಳಸುತ್ತೇವೆ' ಎಂದು ಮಾತು ಕೊಟ್ಟಿದ್ದಾರೆ. ಈ ಚಳವಳಿ ಹೆಗ್ಗಡಹಳ್ಳಿಯ ಮಕ್ಕಳತ್ತ ರಾಜ್ಯವೇ ತಿರುಗಿ ನೋಡುವಂತೆ ಮಾಡಿತು. ಪತ್ರಿಕೆಗಳಲ್ಲಿ ಹೆಗ್ಗಡಹಳ್ಳಿಯ ಮಕ್ಕಳ ಬಗ್ಗೆ ಸಾಕಷ್ಟು ವರದಿಗಳು ಬಂದವು.

## ಒಂದು ಕಾರು ಬಂದಿತು.

ಮಕ್ಕಳ ಚಳವಳಿಯ ಕುರಿತು ಪತ್ರಿಕೆಗಳಲ್ಲಿ ವರದಿಗಳು ಬರುತ್ತಿರುವಾಗಲೇ ಶಾಲೆಗೊಂದು ಇನ್ನೋವಾ ಕಾರು ಬಂದಿತ್ತು. ಅದು ಬೆಂಗಳೂರಿನ ಶಾಸಕರಾದ ಎಸ್. ಸುರೇಶ್ ಕುಮಾರ್ ಅವರ ಕಾರು. ಪತ್ರಿಕೆಗಳಲ್ಲಿ ವರದಿ ನೋಡಿ 'ಇಂಥದ್ದೊಂದು ಆಲೋಚನೆ ಹೇಗೆ ಬಂದಿತು?' ಎಂದು ತಿಳಿಯಲು ಹೆಗ್ಗಡಹಳ್ಳಿಯನ್ನು ಹುಡುಕಿಕೊಂಡು ಬಂದಿದ್ದರು. ಶಾಲೆಗೆ ಬಂದುಹೋದ ಸ್ವಲ್ಪ ಸಮಯದಲ್ಲೇ ಅವರು ಶಿಕ್ಷಣ ಸಚಿವರಾದರು. ಸಚಿವರಾಗಿ ಸರ್ಕಾರಿ ಕಾರ್ಯಕ್ರಮದ ನಿಮಿತ್ತ ನಂಜನಗೂಡಿಗೆ ಬರುವ ಒಂದು ಮುಂಜಾನೆ, 'ನಿಮ್ಮ ಶಾಲೆಗೆ ಬರುತ್ತೇನೆ' ಎಂದು ಸಂದೇಶ ಕಳಿಸಿದ್ದರು. ಅಂದು ಒಂದು ಕಾರಿನಲ್ಲಿ ಬಂದರು, ಈ ಬಾರಿ ಸಾಲು ಸಾಲು ಕಾರುಗಳು ಶಾಲಾ ಅಂಗಳಕ್ಕೆ ಬಂದವು. ಸಚಿವರು ಮಕ್ಕಳೊಡನೆ ಮಾತನಾಡಿದರು. ಮೆಚ್ಚುಗೆ ಸೂಚಿಸಿದರು. 'ದೊಡ್ಡ ದೊಡ್ಡ ಕಾರ್ಪೊರೇಟ್ ಕಂಪನಿಗಳಿಗೆ ಪಾಠ ಹೇಳಿದ ಹೆಗ್ಗಡಹಳ್ಳಿಯಂಥ ಶಾಲೆ ನಮ್ಮ ರಾಜ್ಯದಲ್ಲಿ ಇನ್ನೊಂದಿಲ್ಲ' ಎಂದರು.

ಮೇಲಿನ ಎಲ್ಲವೂ ನನ್ನ ನಾಟಕದ ಮೇಷ್ಟ್ರಗಿರಿಗೆ ಪೂರಕವಾದಂಥವು. ಬದುಕಿನ ಪಾಠಗಳು ಎಂದು ನಾನು ಪರಿಭಾವಿಸಿದ್ದು. ಹೆಗ್ಗಡಹಳ್ಳಿಯಲ್ಲಿ ಈ ಒಂಬತ್ತು ವರ್ಷಗಳಲ್ಲಿ ನಮ್ಮ ಮಕ್ಕಳು ಹಿರಿಯ ಸಾಹಿತಿ ನಾ. ಡಿಸೋಜ ಅವರ ಸಂದರ್ಶನ ಮಾಡಿದರು. ನಾಗೇಶ ಹೆಗಡೆಯವರೊಡನೆ ಪರಿಸರ ವಿಜ್ಞಾನದ ಕುರಿತು ಮಾತನಾಡಿದರು, ಕವನ ಸಂಕಲನ ಹೊರತಂದರು, 'ಪ್ರಜಾವಾಣಿ' ಮಕ್ಕಳ ಕಥಾಸ್ಪರ್ಧೆಯಲ್ಲಿ ಬಹುಮಾನ ಗಳಿಸಿದರು. 'ಪ್ರಜಾವಾಣಿ' ಸಾಪ್ತಾಹಿಕ ಪುರವಣಿಗೆ ಕತೆ ಕವನಗಳನ್ನು ಬರೆದರು. ಖ್ಯಾತ ನಟ ಮಂಡ್ಯ ರಮೇಶ್ ಬಂದು ರಂಗಭೂಮಿ ಬಗ್ಗೆ ಹೇಳಿದರು, ಆನಂದ ಪಾಟೀಲರು ಬಂದು ಮಕ್ಕಳ ಸಾಹಿತ್ಯದ ಕುರಿತು ಮಾತನಾಡಿದರು. 'ಮ್ಯಾನ್' ಸಂಸ್ಥೆಯ ಮನು ಮೈಸೂರು ನಿರಂತರವಾಗಿ ಆಗಮಿಸಿ ವನ್ಯಜೀವಿಗಳ ಕುರಿತು ಸಿನಿಮಾ ತೋರಿಸಿದರು.

ಮಯ್ಯೂರು ಹುಸೇನಿ, ಬಂಡೀಪುರದ ಶ್ರೀಕಂಠ, ಕೆ. ವೆಂಕಟರಾಜು, ಕೆ.ಎಸ್. ಪಾರ್ಥಸಾರಥಿ, ಡಾ. ಎಚ್.ಆರ್. ಸ್ವಾಮಿ, ಮಂಜುಳಾ ಮಿರ್ಲೆ, ಗಿರಿಧರ ಕಾರ್ಕಳ, ಸೌಮ್ಯ ಜೈನ್, ಮಧುಕರ ಮಳವಳ್ಳಿ, ಸೂರ್ಯಕಾಂತ ನಂದೂರ್, ಹೀಗೆ ಹಲವಾರು ಹಿರಿಯರು, ಕಲಾವಿದರು ಹೆಗ್ಗಡಹಳ್ಳಿ ಶಾಲೆಗೆ ಬಂದು ಮಕ್ಕಳೊಂದಿಗೆ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ.

ಕೊರೊನಾ ತಂದೊಡ್ಡಿದ ಎರಡು ವರ್ಷಗಳ ನಿರ್ವಾತವನ್ನು ಬಿಟ್ಟು ನನ್ನ ನಾಟಕದ ಮೇಷ್ಟ್ರಗಿರಿಗೆ ಒಂದು ದಶಕ ತುಂಬಿದೆ. ಹೆಗ್ಗಡಹಳ್ಳಿಯಲ್ಲಿ ವಿಜ್ಞಾನ ನಾಟಕಗಳಲ್ಲದೆ ಇತರೆ ನಾಟಕಗಳನ್ನು ಮಾಡಿ, ಮಕ್ಕಳು ರಾಜ್ಯಮಟ್ಟದಲ್ಲೂ ಬಹುಮಾನಿತರಾಗಿದ್ದಾರೆ. ಇದುವರೆಗೆ ಆಡಿರುವ ಪ್ರಮುಖ ನಾಟಕಗಳು ಹದಿನೈದಕ್ಕೂ ಹೆಚ್ಚು. ಸದ್ಯ, ಕೊರೊನಾ ನಮ್ಮ ಚೈತನ್ಯದ ಚಿಲುಮೆಗೆ ತಡೆ ಒಡ್ಡಿದೆ. ಆ ತಡೆ ಬೇಗನೆ ತೆರವಾಗಿ ನಮ್ಮ ಕಲಿಕೆ ನಿರಂತರವಾಗುತ್ತದೆ ಎಂಬ ಹಂಬಲದೊಂದಿಗೆ, ಕಲಿಸುವುದು ಹಾಗೂ ಕಲಿಕೆ ಮುಂದುವರಿದಿದೆ.

ಪ್ರತಿಕ್ರಿಯಿಸಿ: feedback@sudha.co.in